Reservation of 18 per cent for Scheduled Castes in the matter of appointments.

*Q.—411. Smt. NAGAMMA (Kalmala).—

Will the Government be pleased to state :—

whether it has come to their notice that some of the departments of Government have not observed the rule of reservation of 18 per cent for Scheduled Castes in the matter of appointments ?

A.—Sri S. NIJALINGAPPA (Chief Minister).—

No. All departments of Government observe the Standing Orders regarding reservation of 18 per cent of the direct recruitment vacancies for candidates of the Scheduled Castes/Scheduled Tribes.

ಶ್ರೀಮತಿ ನಾಗಮ್ಮ.—ಸ್ವಾಮಿ, ಸರ್ಕಾರದವರು ಕೆಲವು ಇಲಾಖೆಗಳವರು ನೇಮಕ ಮಾಡಿಕೊಳ್ಳುವ ಸಂಬಂಧದಲ್ಲಿ ಅನುಸೂಚಿತ ಜಾತಿಗಳವರಿಗೆ ಶೇಕಡಾ 18 ರಷ್ಟು ಹುದ್ದೆಗಳನ್ನು ಮೀಸಲಾಗಿಡುವ ನಿಯಮವನ್ನು ಅನುಸರಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದವರು ಆ ತತ್ವವನ್ನು ಒಪ್ಪಿಕೊಂಡಿದ್ದಾರೆ.

ಶ್ರೀಮತಿ ನಾಗಮ್ಮ.—ಈಗಲಾದರೂ ಸರ್ಕಾರದವರು ಇದನ್ನು ಗಮನಕ್ಕೆ ತೆಗೆದು ಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನಮ್ಮ ಗಮನದಲ್ಲಿದ್ದೇ ಇದೆ.

ಶ್ರೀ ಜಿ. ದುಗ್ಗಪ್ಪ.—ಹಿಂದೆ ಸರ್ಕಾರದವರು ಒಂದು ಬೀರಪ್ಪ ಸಮಿತಿ ಎಂತ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯವರು ತಮ್ಮ ವರದಿಯಲ್ಲಿ ಯಾವ ಯಾವ ಇಲಾಖೆಯಲ್ಲಿ ಶೇ. 18 ರಷ್ಟು ಈ ಷೆಡ್ಯೂಲ್ಡ್ ಕ್ಯಾಸ್ಟಿನವರನ್ನೂ ಮತ್ತು ಷೆಡ್ಯೂಲ್ಡ್ ಟ್ರೈಬಿನವರನ್ನೂ ನೇಮಕ ಮಾಡಿಲ್ಲವೋ ಅಂಥ ಇಲಾಖೆಗಳನ್ನು ಅವರು ಸೂಚಿಸಿದ್ದರು. ಈಗ ಆ ಇಲಾಖೆಗಳಲ್ಲಿ ಅವರು ಇದನ್ನು ಸರಿಯಾಗಿ ಅನುಸರಿಸುತ್ತಿದ್ದಾರೆಯೇ, ಅದರ ಬಗ್ಗೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ?

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ಎಲ್ಲಿಯೂ ಹಾಗೆ ಅನ್ಯಾಯವೇನೂ ಆಗಿಲ್ಲ. ವೇಕನ್ಸಿಗಳಿದ್ದರೂ ಆ ಕ್ಯಾಂಡಿಡೇಟುಗಳೇ ಬರುತ್ತಿಲ್ಲ. ಅವರು ಬಂದರೆ ಸರ್ಕಾರದವರು ಆ ನೇಮಕವನ್ನು ಯಾವತ್ತೂ ಅನುಸರಿಸಲು ಸಿದ್ಧರಿದ್ದಾರೆ.

ಶ್ರೀ ಗೋಪಾಲ ಸಾಲೆನ್ನ.—ಸರ್ಕಾರದವರು 18 ಪರ್ಸೆಂಟ್ ಸ್ಥಾನಗಳನ್ನು ಇವರಿಗೆ ಮೀಸಲಾಗಿಡಲಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಇಲ್ಲಿಯವರೆಗೂ ಒಂದು, ಎರಡು ಮತ್ತು ಮೂರನೇ ತರಗತಿ ನೌಕರಿಗಳಲ್ಲಿ ಹಾಗೂ ಗೆಜೆಟೆಡ್ ನೌಕರಿಗಳಲ್ಲಿರತಕ್ಕ ಈ ನಿಮ್ನವರ್ಗದವರ ಸಂಖ್ಯೆ ಎಷ್ಟು ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿವರಗಳು ಈಗ ನನ್ನ ಮುಂದಿಲ್ಲ. ಬೇರೆ ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರವನ್ನು ಕೊಡಲಾಗುತ್ತದೆ. ಆದರೆ ಯಾವ ಇಲಾಖೆಯಲ್ಲೂ ಒಂದು ಮತ್ತು ಎರಡನೇ ದರ್ಜೆಯ ನೌಕರಿಗಳಲ್ಲಿ ಇವರ ಸಂಖ್ಯೆ ಆ ಮಟ್ಟಕ್ಕೆ ಬಂದಿಲ್ಲ. ಅರ್ಜಿ ಬಂದಾಗ ಅವರನ್ನು ನೇಮಕ ಮಾಡಿಕೊಳ್ಳುತ್ತೇವೆ.

ಶ್ರೀ ಗೋಪಾಲ ಸಾಲೆನ್ನ.—ತಾ॥ 18-2-1963 ಕ್ಕೆ ಅಂಕಿ ಅಂಶಗಳ ಇಲಾಖೆಯ ಡೈರಕ್ಟರವರು ಸರ್ಕಾರಿ ನೌಕರಿಯಲ್ಲಿ ಪಿ.ಡಬ್ಲು.ಡಿ. ನಲ್ಲಿ ಎಷ್ಟು ಜನರಿದ್ದಾರೆಂಬ ಬಗ್ಗೆ ಒಂದು ವರದಿಯನ್ನು ಕಳುಹಿಸುವಂತೆ ತಿಳಿಸಿದಾಗ್ಗೂ ಆ ಇಲಾಖೆಯವರು ಮತ್ತು ಇನ್ನೂ ಕೆಲವು ಇಲಾಖೆಯವರು ಕಳುಹಿಸಿಲ್ಲ ಇದನ್ನು ತನಿಖೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾಡೋಣ.

ಶ್ರೀ ಜಿ. ದುಗ್ಗಪ್ಪ.—ಸರ್ಕಾರಿ ಕಾಲೇಜುಗಳಲ್ಲಿ ಲಕ್ಚರರ್ಸ್ ಸ್ಥಾನಗಳನ್ನು ಭರ್ತಿಮಾಡುವಾಗ ಶೇ. 18 ರಂತೆ ಸ್ಥಾನಗಳನ್ನು ನಿಮ್ನವರ್ಗದವರಿಗೆ ಮೀಸಲಾಗಿಡಬೇಕೆಂದು ಸರ್ಕಾರದ ಕಾನೂನಿದೆ ಇದರ ಬಗ್ಗೆ ಇನ್ನುಳಿದ ವಿಶ್ವವಿದ್ಯಾನಿಲಯದವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ವಿಷಯ. ಇದು ಅವರಿಗೂ ಗೊತ್ತಿದೆ. ಅವರೇ ಮಾಡುತ್ತಾರೆ. ಅನ್ಯಾಯವಾಗಿದ್ದರೆ ತಿಳಿಸಿದರೆ, ನಾನು ಅವರಿಗೆ ತಿಳಿಸುತ್ತೇನೆ.

Sri GANJI VEERAPPA.—Has it come to the notice of the Government that a reference has been made to Government in this connection and as a matter of fact it is not being observed there ?

Sri S. NIJALINGAPPA.—It was brought to my notice and I find concerned individual is in service.

ಶ್ರೀ ಗೋಪಾಲ ಸಾಲೆನ್ನ.—1961 ರಲ್ಲಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಪುನಃ 1963 ರಲ್ಲಿ ಪ್ರತಿಯೊಂದು ಯೂನಿಟ್ಟುಗಳ ಆಫೀಸರೂ ನಿಮ್ನವರ್ಗದವರಿಗೆ ಶೇ. 18 ರಂತೆ ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಮಾಡಲಾಗಿದೆ. ಈ ಆಜ್ಞೆಯನ್ನು ಅವರೆಲ್ಲಾ ಸರಿಯಾಗಿ ಅನುಸರಿಸದ ತಪ್ಪಿತಸ್ಥರ ಬಗ್ಗೆ ಸರ್ಕಾರದವರು ಇಲ್ಲಿಯವರೆಗೆ ಎಷ್ಟು ಆಕ್ಷನ್ ತೆಗೆದುಕೊಂಡಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ ಆಕ್ಷನ್ ತೆಗೆದುಕೊಳ್ಳತಕ್ಕ ಸಂದರ್ಭವೇ ಇರುವುದಿಲ್ಲ, ಸಾಕಷ್ಟು ಜನರೇ ಬರುವುದಿಲ್ಲ. ಬಂದವರಿಗೆಲ್ಲಾ ರಿಕ್ರೂಟ್‌ಮೆಂಟ್ ಸ್ಪೇಜಿನಲ್ಲೇ ಅನುಕೂಲ ಮಾಡಿಕೊಡುತ್ತಿದ್ದೇವೆ.

ಶ್ರೀ ಗೋಪಾಲ ಸಾಲೆನ್ನ.—1961 ರಲ್ಲಿ ಹಂಗಾಮಿಯಾಗಿ ನೇಮಕ ಮಾಡಿಕೊಳ್ಳಲಾಗಿದ್ದ ನೂರಾರು ಜನ ನಿಮ್ನವರ್ಗದವರನ್ನು ತೆಗೆದು ಹಾಕಿದ್ದರು. ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಅನ್ಯಾಯವಾಗಿರತಕ್ಕದ್ದು ತಿಳಿಸಿದರೆ ಅದನ್ನು ಸರಿಪಡಿಸೋಣ.

ಶ್ರೀಮತಿ ಚಂಪಾಬಾಯಿ ಭೋಗಳೆ.—ಮುಂಬೈ ಕರ್ನಾಟಕದಲ್ಲಿ ಹೈಯರ್ ಪರೀಕ್ಷೆಗಳಲ್ಲಿ ಪಾಸಾಗಿರತಕ್ಕವರಿದ್ದರೆ ಅವರಿಗೆ ಏಕೆ ಪ್ರಮೋಷನ್ ಕೊಡಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಆ ವಿಚಾರ ತಿಳಿದಿಲ್ಲ. ಅಲ್ಲಿ ಅನ್ಯಾಯವಾಗಿದ್ದರೆ ತಿಳಿಸಿ, ಅದನ್ನು ಸರಿಪಡಿಸಲಾಗುತ್ತದೆ.

Establishment of a Research Unit by the State Electricity Board.

* *Q.*—544. Sri S. S. KOLKEBAIL (Coondapur).—

Will the Government be pleased to state:—

(*a*) whether the Government has received any grant-in-aid from the Central Gevernment under the III Plan for research in fundamental and basic problems in power to site the testiug laboratory(research unit) attaching to the Electricity Board ;

(*b*) if so, whether the State Electricity Board has established such a Research Unit ?

A.—Sri S. NIJALINGAPPA (Chief Minister).—

(*a*) Yes.
(*b*) Yes.

Sri S. S. KOLKEBAIL.—May I know the date and the year when this Research Institute was established ?

Sri S. NIJALINGAPPA.—It was established on 1st November 1961.

Sri T. R. PARAMESWARAIAH.—May I know the pattern of research in this Unit ?